# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ



# ಬಾವಿಯ ಹತ್ತಿರವಿದ್ದ ಸ್ತ್ರೀ

ಬರಹಗಾರರು: Edward Hughes

ಚಿತ್ರಲೇಖಕರು: Lazarus

ಅಳವಡಿಸುವವರು: Ruth Klassen

ಪದ್ಮಾ ಸೈಲೇಸ್: Vinay Shirol

Alastair Paterson

ತಯಾರಕರು: Bible for Children

www.M1914.org

©2020 Bible for Children, Inc.

ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಯೇಸು ಮತ್ತು ಆತನ ಶಿಷ್ಯರು ಪ್ರಯಾಣಿಸಿ ಸಮಾರ್ಯದಲ್ಲಿರುವ ಸುಖರೆಂಬ ಊರಿಗೆ ಬಂದರು.



ಬಹಳ ವರ್ಷಗಳ ಹಿಂದೆ ಇಸ್ರೇಯೇಲರ ಇಸ್ರಾಯೇಲ್ಯರ ತಂದೆಯಾದ ಯಾಕೋಬನು ತಗಿಸಿರುವ ಬಾವಿಯಲ್ಲಿ ಆ ಸುಖರೆಂಬ ಊರಿನವರು ಕುಡಿಯುವುದಕ್ಕೆ ನೀರನ್ನು ಸೇದುತ್ತಿದ್ದರು.



ಶಿಷ್ಯರು ಸುಖರೆಂಬ ಊರಿಗೆ ಆಹಾರವನ್ನು ತರುವುದಕ್ಕೆ ಹೋದಾಗ ಯೇಸುವು ಬಾವಿಯ ಹತ್ತಿರ ಕೂತುಕೊಂಡಿದ್ದನು.





ಯೇಸುವು ಬಾವಿಯ ಹತ್ತಿರ
ಕೂತುಕೊಂಡಿರುವಾಗ ಆ ಸುಖರೆಂಬ
ಊರಿನಿಂದ ಒಬ್ಬ ಹೆಂಗಸು
ನೀರನ್ನು ಸೇದುವುದಕ್ಕೆ
ಆ ಬಾವಿಗೆ ಹತ್ತಿರ
ಬಂದಳು.

ಅವಳನ್ನು ಯೇಸುವು
ನೋಡಿ ನನಗೆ ಕುಡಿಯುವುದಕ್ಕೆ
ಸಲ್ಪ ನೀರು ಕೊಡು ಎಂದು
ಆಕೆಯನ್ನು ಕೇಳಿದನು.



ಆ ಹೆಂಗಸಿಗೆ ಆಶ್ಚರ್ಯವಾಯಿತು ಯಹೂದ್ಯನಾದ ನೀನು ಸಮಾರ್ಯದವರಿಂದ ನೀರನ್ನು ಕೇಳುವುದು ಹೇಗೆ ಅಂದಳು. ಆ ದಿನಗಳಲ್ಲಿ ಯಹೂದ್ಯರು ಮತ್ತು ಸಮಾರ್ಯದವರಿಗೆ ಬಳಕೆ ಇರಲಿಲ್ಲ.

ಯೇಸು ಹೇಳಿದ್ದು “ನಾನು ಯಾರು ಎಂದು
ನೀನು ತಿಳಿಯುವುದಾದರೆ,
ನೀನು ನಿನಗೆ ಜೀವವುಳ್ಳ ಆ
ನೀರನ್ನು ಕುಡಿಯುವುದಕ್ಕೆ
ಕೊಡು ಎಂದು ಕೇಳುವಿ”
ಅಂದನು. ಹೀಗೆ ಹೇಳಿದ್ದಕ್ಕೆ
ಅವಳಿಗೆ ಇನ್ನೂ
ಆಶ್ಚರ್ಯವಾಯಿತು.



ಸ್ವಾಮಿ! ನಾನು ನಿಮಗೆ
ನೀರನ್ನು ಕೊಡು ಎಂದು
ಕೇಳಿದರೆ, ಈಗ
ನಿನ್ನ ಹತ್ತಿರ ನೀರನ್ನು
ಸೇದುವುದಕ್ಕೆ ಏನು
ಇಲ್ಲ! ಹೇಗೆ ಆ ಜೀವಯುಳ್ಳ
ನೀರನ್ನು ಕೊಡುತ್ತೀಯ? ಈ
ಬಾವಿಯನ್ನು ತಗೆದಂತ ನಮ್ಮ ಪಿತೃವಾದ
ಯಾಕೋಬನಿಗಿಂತ ನೀನು ದೊಡ್ಡವನಾ?





ಯೇಸು ಹೇಳಿದ್ದು, ‘ಯಾರಾರು ಈ ನೀರನ್ನು
ಕುಡಿಯುತ್ತಾರೊ ಅವರಿಗೆ ಪುನ:
ಬಾಯಾರಿಕೆಯಾಗುತ್ತದೆ ಆದರೆ
ನಾನು ಕೊಡುವ ನೀರನ್ನು
ಕುಡಿದರೆ ಎಂದಿಗೂ
ಬಾಯಾರಿಕೆಯಾಗುವುದಿಲ್ಲ’.



ನಾನು ಅವನಿಗೆ ಕೊಡುವ ನೀರು ಅವನಲ್ಲಿ
ಊಕ್ಕುವ ಒರತೆಯಾಗಿದ್ದು
ಅವನಿಗೆ ನಿತ್ಯಜೀವವನ್ನು
ಉಂಟುಮಾಡುತ್ತದೆ. ಆಗ
ಆಕೆಯು ‘ಅಯ್ಯ ನನಗೆ
ಆ ನೀರನ್ನು ಕೊಡು’
ಎಂದಳು.

ಯೇಸು ‘ಹೋಗಿ ನಿನ್ನ ಗಂಡನನ್ನು ಕರೆ ಅಂದಾಗ ಆಕೆಯು ನನಗೆ ಗಂಡನಿಲ್ಲ’ ಅಂದಳು. ‘ನಿನಗೆ ಐದುಮಂದಿ ಗಂಡಂದಿರಿದ್ದಾರೆ ಈಗ ಇರುವವನು ನಿನ್ನ ಗಂಡನಲ್ಲ’ಎಂದು ಯೇಸು ಹೇಳಿದನು.



ಅಯ್ಯ ನೀನು ಪ್ರವಾದಿಯೆಂದು ಕಾಣುತ್ತದೆ,
ನಾವು ದೇವರನ್ನು ಯೆರೂಸಲೇಮ್‌ನಲ್ಲಿಯೊ
ಆಥಾವ ಸಮಾರ್ಯದ ಬೆಟ್ಟದಲ್ಲಿ ಆರಾದೆನೆ
ಮಾಡಬೇಕೋ ಎಂದು ಕೇಳಿದಳು.



ಯೇಸು ಹೇಳಿದ್ದು ‘ಸತ್ಯಬಾವದಿಂದ ದೇವರನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ತಂದೆಯನ್ನು ಆರಾಧಿಸುವ ಕಾಲ ಬರುತ್ತದೆ’ ಅಂದನು.



‘ಮೆಸ್ಸೀಯನು ಬರುತ್ತಾನೆಂದು ನಮಗೆ ಗೊತ್ತಿದೆ ಆತನು ಬಂದು ಎಲ್ಲವನ್ನು ಹೇಳಿ ಕೊಡುತ್ತಾನೆ’ ಎಂದು ಆ ಆಕೆಯು ಯೇಸುವಿಗೆ ಹೇಳಲಾಗಿ. ಯೇಸು ‘ನೀನು ಮಾತಡುತ್ತಿರುವವನಾದ ನಾನೇ ಆ ಮೆಸ್ಸೀಯನು ಆಂದಾಗ’ ಶಿಷ್ಯರು ತಿರುಗಿ ಬರುವುದನ್ನು ಕಂಡನು.



ಅದನ್ನು ಕೇಳಿದ ಸ್ತ್ರಿಯು ತನ್ನ ಕೈಯಲ್ಲಿದ್ದ ಕೊಡವನ್ನು ಅಲ್ಲೆ ಬಿಸಾಡಿ ಪಟ್ಟಣದೊಳಗೆ ಹೋದಳು.



ಸುಖರೆಂಬ ಊರಿನಲ್ಲಿರುವಂತ ಎಲ್ಲಾ
ಜನರಿಗೆ ಹೇಳಿದ್ದೆನೆಂದರೆ
ಆ ಮನುಷ್ಯನು
ನಾನು ಮಾಡಿದಂತ
ಎಲ್ಲಾ
ವಿಷಯವನ್ನು
ತಿಳಿಸಿದನು
ಅಂದಳು, ...



... ಆತನು ಕ್ರಿಸ್ತನಾಗಿರಬಹುದು
ಎಂದಾಗ ಅಲ್ಲಿರುವಂತ
ಜನರು ಯೇಸುವನ್ನು
ನೋಡಲು
ಹೋದರು.



ಆ ಸಮಯದಲ್ಲಿ ಶಿಷ್ಯರು ಯೇಸುವಿಗೆ ಊಟಮಾಡು ಎಂದು ಹೇಳಿದರು. ಅದಕ್ಕೆ ಯೇಸು ‘ನನ್ನನ್ನು ಕಳಿಸಿದಾತನ ಚಿತ್ತವನ್ನು ಮಾಡುವುದೆ’ ನನ್ನ ಆಹಾರವೆಂದರು. ಆತನ ಕೆಲಸ ಜನರನ್ನು ದೇವರ ಹತ್ತಿರ ಕರೆದುಕೊಂಡು ಬರುವುದಾಗಿತ್ತು.



ಆ ಸ್ತ್ರೀಯ ಮಾತಿನ ಮೇರಗೆ ಆನೇಕ ಸಮಾರ್ಯದವರು ಯೇಸುವನ್ನು ನಂಬಿದರು. ಮತ್ತು



ಯೇಸುವನ್ನು ಅವರ ಸಂಗಡ ಉಳಿಯುವುದಕ್ಕೆ ಅವರು ಒತ್ತಾಯ ಮಾಡಿದಾಗ ಯೇಸುವು ಎರಡು ದಿನ ಅಲ್ಲೆ ಉಳಿದರು.

ಯೇಸುವಿನ ಮಾತನ್ನು ಕೇಳಿ ಇನ್ನೂ
ಅನೇಕ ಜನರು ನಂಬಿದರು ಮತ್ತು ಆತನೆ



ಲೋಕವನ್ನು
ರಕ್ಷಿಸುವ
ಕ್ರಿಸ್ತನೆಂದು
ತಿಳಿದುಕೊಂಡರು.

ಬಾವಿಯ ಹತ್ತಿರವಿದ್ದ ಸ್ತ್ರೀ

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಯೋಹಾನ 4

"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."
ಕೀರ್ತನೆ 119:130

ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು
ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು  ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು.
ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16